ದಿನಾಂಕ 23-06-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ವಿ.ಕೆ., ವಕೀಲರಿಂದ:-

14. ನಿಪಿ-1ರಲ್ಲಿ 21 ದಿವಸ ಅವಧಿ ನಿಗದಿ ಮಾಡಲಾಗಿತ್ತು ಎಂದರೆ ಸಾಕ್ಷಿಯು ಸರ್ವೇ ಆದ ನಂತರ ಎಂದು ನುಡಿಯುತ್ತಾರೆ. ನಿಪಿ-1ರಲ್ಲಿ ದಿನಾಂಕ 28.02.2013ರಂದು ಅಥವಾ ಆ ಅವಧಿಯ ಒಳಗೆ 3,75,00,000/- ರೂ ಪಾವತಿಸಿ ಕ್ರಯಪತ್ರ ನೋಂದಣಿ ಮಾಡಿಕೊಳ್ಳಬೇಕೆಂದು ಇದೆ ಎಂದರೆ ಸಾಕ್ಷಿಯು ನಾವು ರೆಡಿ ಇದ್ದೆವು, ಅವರು ಸರ್ವೇಗೆ ಬರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-1ರಲ್ಲಿ ಖಂಡಿಕೆ 8ರಲ್ಲಿ ಎರಡನೇ ಪಾರ್ಟಿ ಪೇಮೆಂಟ್ ಷೆಡ್ಯೂಲ್‌ಗೆ ಬದ್ಧರಾಗಿರುತ್ತಾರೆ ಎಂದು ಷರತ್ತು ಇದೆ ಎಂದರೆ ಸರಿ. ಈ ದಾವೆ ಸಲ್ಲಿಸಿದ್ದು ದಿನಾಂಕ 08.07.2016ರಂದು ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ದಾಖಲೆಯ ಪ್ರಕಾರ ದಿನಾಂಕ 28.02.2013ಕ್ಕೆ ಟ್ರಾನ್ಸಾಕ್ಷನ್ ಮುಕ್ತಾಯಗೊಳ್ಳಬೇಕಿತ್ತು ಎಂದರೆ ಸಾಕ್ಷಿಯು ಇಬ್ಬರೂ ಜೊತೆಯಲ್ಲಿ ಅಳತೆ ಮಾಡಿಸಿದಾಗ ಮಾತ್ರ ಅನ್ವಯವಾಗುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 28.02.2013 ರಿಂದ ದಿನಾಂಕ 28.02.2016ರವರೆಗೆ ದಾವೆ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಇರಲಿಲ್ಲ, ಮಧ್ಯವರ್ತಿಗಳು ಅವರನ್ನು ಕರೆದುಕೊಂಡು ಬರುತ್ತೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

15. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದ ಪ್ಯಾರಾ 3ರಲ್ಲಿ ಹೇಳಿರುವ ವಿಸ್ತೀರ್ಣ ನಿಪಿ-1ರಲ್ಲಿ ಇಲ್ಲ ಎಂದರೆ ಸಾಕ್ಷಿಯು ನಿಪಿ-1 ಪ್ರತಿವಾದಿಗಳ ಕಛೇರಿಯಲ್ಲೇ ತಯಾರಾದದ್ದು ಎಂದು ನುಡಿಯುತ್ತಾರೆ. ವಾದಪತ್ರದ ಪ್ಯಾರಾ 4 ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರದ ಪ್ಯಾರಾ 3ರಲ್ಲಿ ಹೇಳಿರುವ ವಿಸ್ತೀರ್ಣ ಹೋಲಿಕೆಯಾಗುವುದಿಲ್ಲ ಎಂದರೆ ನೆನಪಿಲ್ಲ. ವಾದಪತ್ರದಲ್ಲಿ ಹೇಳಿರುವ ಕ್ರಯದ ಮೊತ್ತ ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರದ

ಪ್ಯಾರಾ 4ರಲ್ಲಿ ಹೇಳಿರುವ ಮೊತ್ತ ಹೋಲಿಕೆಯಾಗುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ತಿಳುವಳಿಕೆ ಇಲ್ಲ ಎಂದು ನುಡಿಯುತ್ತಾರೆ.

16. ದಾವಾ ಸ್ವತ್ತಿನಲ್ಲಿ ರಸ್ತೆ ಹೋಗಿದೆ ಎಂಬ ವಿಚಾರ ನಾನು ಸ್ಥಳಕ್ಕೆ ಹೋದಾಗ ಗೊತ್ತಾಯಿತು. ದಾವಾ ಸ್ವತ್ತಿನಲ್ಲಿ ರಸ್ತೆ ಹೋಗಿದೆ ಎಂದು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ನೆನಪಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಕೆರೆ ಇರುವ ಬಗ್ಗೆ ವಾದಪತ್ರದಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ನಿಪಿ-1ನ್ನು ಪ್ರತಿವಾದಿಗಳೇ ಬರೆಸಿದ್ದು, ಅವರು ಸ್ಥಳದಲ್ಲಿ ಅಳತೆ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಒತ್ತುವರಿ ಮಾಡಿರುವ ವಿಚಾರ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ನೋಡಿದರೆ ಒತ್ತುವರಿ ಆಗಿರುವಂತೆ ಕಾಣುತ್ತಿತ್ತು ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸುವ ಮುಂಚೆ ಒತ್ತುವರಿಯಾಗಿರುವ ವಿಚಾರ ಗೊತ್ತಿತ್ತು. ಈ ವಿಚಾರವನ್ನು ವಾದಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ. ದಾವೆ ಸಲ್ಲಿಸಿದ ಕಾಲಕ್ಕೆ ಒತ್ತುವರಿ ವಿಚಾರ ನಮಗೆ ತಿಳುವಳಿಕೆ ಇರಲಿಲ್ಲ, ದಾವೆ ಸಲ್ಲಿಸಿದ ನಂತರ ತಿಳಿದುಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಪತ್ರಿಕಾ ಪ್ರಕಟಣೆ ಹೊರಡಿಸಿದ 15 ದಿವಸದಲ್ಲಿ ಜಂಟಿ ಸರ್ವೇಗಾಗಿ ಪ್ರತಿವಾದಿಗಳು ಸಹಕಾರ ನೀಡಲಿಲ್ಲ ಎಂದು ಮೋಹನ್‌ಕುಮಾರ್ ರವರಿಗೆ ಲಿಖಿತ ರೂಪದಲ್ಲಿ ನೋಟಿಸ್ ಕೊಟ್ಟಿಲ್ಲ, ಆದರೆ ಖುದ್ದಾಗಿ ಭೇಟಿ ಮಾಡಿ ಹೇಳಿದ್ದೇನೆ. ದಿನಾಂಕ 31.01.2014ರಂದು ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ ಎಂದು ರಿಪ್ಲೈ ಲೆಟರ್ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ದಿನಾಂಕದಿಂದ ನಮ್ಮ ಬಳಿ ಕ್ರಯದ ಬಾಕಿ ಹಣ ಇಲ್ಲದ ಕಾರಣ ದಾವೆ ಸಲ್ಲಿಸುವವರೆಗೂ ನಾವು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 31.01.2014 ರಿಂದ ದಾವೆ ಸಲ್ಲಿಸುವವರೆಗೆ ಕಾನೂನು ಕ್ರಮ ಕೈಗೊಳ್ಳದಿರಲು ಏನು ಕಾರಣ ಎಂದರೆ ಸಾಕ್ಷಿಯು ಮಧ್ಯವರ್ತಿಗಳು ಪ್ರತಿವಾದಿಗಳನ್ನು ಕರೆದುಕೊಂಡು ಬರುತ್ತೇವೆ ಎಂದು ಹೇಳುತ್ತಿದ್ದರು ಎಂದು

ನುಡಿಯುತ್ತಾರೆ. ಸದರಿ ಮಧ್ಯವರ್ತಿಗಳನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ. ಮಧ್ಯವರ್ತಿಗಳೆಂದರೆ ಜೆ.ಪಿ.ಸತೀಶ್ ಕುಮಾರ್.

18. 15 ದಿವಸದ ಒಳಗೆ ಜಂಟಿ ಸರ್ವೇ ಮಾಡಿಸದಿದ್ದಾಗ ಏನು ಕಾನೂನು ಕ್ರಮ ಕೈಗೊಂಡಿದ್ದೀರಿ ಎಂದರೆ ಸಾಕ್ಷಿಯು ನಾವು ಅವರನ್ನು ಕೇಳಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನೀವು ಕೇಳಿದಾಗಲೂ ಪ್ರತಿವಾದಿಗಳು ಸಹಕಾರ ಮಾಡಿಲ್ಲ ಎಂದು ನೀವು ಹೇಳುವುದಾ ಎಂದರೆ ಸಾಕ್ಷಿಯು ಮಧ್ಯವರ್ತಿಗಳೇ ಪ್ರತಿವಾದಿಗಳನ್ನು ಕರೆದುಕೊಂಡು ಬರುತ್ತೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.